**ದಿನಾಂಕ 24.11.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ 4 ನೇ ಪ್ರತಿವಾದಿ ಪರ: ಶ್ರೀ. ಎಂ.ಓ.ಜೆ. ವಕೀಲರಿಂದಃ–**

ಇ.ತಿಮ್ಮಾಪುರ ಮತ್ತು ಚೌಳಹಿರಿಯೂರು ಗ್ರಾಮದ ಸ್ವತ್ತುಗಳಿಗೆ ನಾನು ಈ ದಾವೆಯನ್ನು ಸಲ್ಲಿಸಿರುತ್ತೇನೆ. ನಮ್ಮ ಕುಟುಂಬಕ್ಕೆ ಸೇರಿದಂತೆ ಭಾಗಶೆಟ್ಟಿಹಳ್ಳಿ ಗ್ರಾಮದಲ್ಲಿ ಯಾವುದೇ ಸ್ವತ್ತು ಇರುವುದಿಲ್ಲ. ನನ್ನ ಅಜ್ಜನ ತಂದೆ ಯಾಗಪ್ಪ ಎಂದರೆ ಸರಿ. ನನ್ನ ಅಜ್ಜನ ತಂದೆ ಯಾಗಪ್ಪನವರಿಗೆ ಮೂರು ಜನ ಮಕ್ಕಳು ಎಂದರೆ ಸರಿ. ಅವರುಗಳೆಂದರೆ ನನ್ನ ಅಜ್ಜ ಮೂಡ್ಲಪ್ಪ, ವೈ.ತಿಮ್ಮಪ್ಪ ಮತ್ತು ಸಿದ್ದಪ್ಪ ಆಗಿರುತ್ತಾರೆ ಎಂದರೆ ಸರಿ. ವೈ.ತಿಮ್ಮಪ್ಪರವರ ಬೀರೂರಿನಲ್ಲಿ ವಾಸವಿರುತ್ತಾರೆ ಎಂದರೆ ಸರಿ. ಚೌಳಹಿರಿಯೂರು ಗ್ರಾಮದ ಸರ್ವೆ ನಂ.188/1 ರಲ್ಲಿ 09 ಗುಂಟೆ ಸ್ವತ್ತನ್ನು ದಿನಾಂಕ 21.05.1975 ರಲ್ಲಿ ಕೆಂಚಮ್ಮ ಕೋಂ ಮೂಗಿನಗಿಂಗಿ ಸಿದ್ಲಿಂಗಪ್ಪನವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅವರ ಹೆಸರಿಗೆ ಖಾತೆಯು ಸಹ ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

ಚೌಳಹಿರಿಯೂರು ಗ್ರಾಮದ ಸರ್ವೆ ನಂ.303/4 ರಲ್ಲಿ ವಿಸ್ತೀರ್ಣ 20 ಗುಂಟೆ ಸ್ವತ್ತನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ, ಸಾಕ್ಷಿಯು ಸದರಿ ಸ್ವತ್ತು ನಮಗೆ ಸಂಬಂಧಿಸಿದ್ದಾಗಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಸ್ವತ್ತನ್ನು ದಿನಾಂಕ 21.05.1975 ರಲ್ಲಿ ನನ್ನ ಅಜ್ಜನ ತಮ್ಮ ವೈ.ತಿಮ್ಮಪ್ಪನವರು ರಾಮಣ್ಣ ಬಿನ್ ಯಾಗಣ್ಣನ ತಿಮ್ಮಣ್ಣ ಎಂಬುವವರಿಗೆ ಕ್ರಯಕ್ಕೆ ಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಕ್ರಯಪತ್ರದಲ್ಲಿ ಚಕ್ಕುಬಂದಿಯನ್ನು ಸಹ ನಮೂದಿಸಿದ್ದು ಪೂರ್ವಕ್ಕೆ– ಯಾಗಣ್ಣನ ನಂಜಪ್ಪನವರ ಮಗ ರಂಗಪ್ಪನವರ ಹಿಸ್ಸೆಯ ಸ್ವತ್ತು, ಪಶ್ಚಿಮಕ್ಕೆ– ವೆಂಕಟಪ್ಪನ ಮಗ ನಂಜುಂಡಪ್ಪನವರ ಹಿಸ್ಸೆಯ ಸ್ವತ್ತು, ದಕ್ಷಿಣಕ್ಕೆ– ಬೂದಿಯಾಳ್ ಕಲ್ಲಪ್ಪ ಬಿನ್ ನಿಂಗಪ್ಪರವರ ಸ್ವತ್ತು, ಉತ್ತರಕ್ಕೆ– ಗೌಡ್ರು ಶಿವಮೂರ್ತಿ ಮತ್ತು ಶೇಖರಪ್ಪರವರ ಸ್ವತ್ತು ಎಂದು ನಮೂದಿಸಲಾಗಿರುತ್ತದೆ ಎಂದರೆ ಸರಿಯಲ್ಲ. ಅದೇ ದಿನ ನನ್ನ ಅಜ್ಜನ ತಮ್ಮ ವೈ.ತಿಮ್ಮಪ್ಪನವರು ಹೆಚ್.ಪಿ.ತಿಮ್ಮಪ್ಪ ಬಿನ್ ಚೆನ್ನಕರಿಹಳ್ಳಿ ಬಾವಿಸಿದ್ದಪ್ಪನವರಿಗೆ ನಿವೇಶನವಾದ ಹೌಸ್‌ಲಿಸ್ಟ್ ನಂಬರಾದ 28 ಪೂರ್ವ–ಪಶ್ಚಿಮ 176 ಅಡಿ, ಉತ್ತರ–ದಕ್ಷಿಣ 48 ಅಡಿ ನಿವೇಶನವನ್ನು ಮಾರಾಟ ಮಾಡಿದ್ದರು

ಎಂದರೆ ನನಗೆ ಗೊತ್ತಿಲ್ಲ. ಅದೇ ದಿನ 4 ನೇ ಪ್ರತಿವಾದಿಯ ದೊಡ್ಡಪ್ಪನವರಾದ ಗವಿಸಿದ್ದಪ್ಪ ಬಿನ್ ಗವಿಯಣ್ಣನ ನಂಜಪ್ಪನವರಿಗೆ ನನ್ನ ಅಜ್ಜನ ತಮ್ಮನಾದ ವೈ.ತಿಮ್ಮಪ್ಪನವರು ಇ.ತಿಮ್ಮಾಪುರ ಗ್ರಾಮದ ಸರ್ವೆ ನಂ.37 ರಲ್ಲಿ 37 ಗುಂಟೆಯನ್ನು ಕ್ರಯಕ್ಕೆ ಕೊಟ್ಟಿದ್ದರು ಎಂದರೆ ಸರಿಯಲ್ಲ. ನನ್ನ ಅಜ್ಜನ ತಮ್ಮ ಸುಮಾರು 40 ವರ್ಷಗಳ ಹಿಂದೆಯೇ ಈ ಮೇಲಿನಂತೆ ಸ್ವತ್ತುಗಳನ್ನು ಮಾರಾಟ ಮಾಡಿದ್ದರಿಂದ ಸದರಿ ಸ್ವತ್ತುಗಳಲ್ಲಿ 4 ನೇ ಪ್ರತಿವಾದಿಯ ದೊಡ್ಡಪ್ಪನವರು ಸ್ವಾಧೀನದಲ್ಲಿ ಇದ್ದು ಅದನ್ನು ಹಿಸ್ಸಾ ಭಾಗದಲ್ಲಿ 4 ನೇ ಪ್ರತಿವಾದಿಗೆ ಬಿಟ್ಟು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

ದಿನಾಂಕ 21.05.1975 ರಂದು ಈ ಮೇಲಿನಂತೆ ಆಸ್ತಿಗಳನ್ನು ಖರೀದಿ ಮಾಡಿರುವ ಖರೀದಿದಾರರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ, ಸಾಕ್ಷಿಯು ನನ್ನ ತಾತನ ಹಿಸ್ಸೆಗೆ ಬಂದ ಸ್ವತ್ತುಗಳಿಗೆ ಮಾತ್ರ ನಾನು ಈ ದಾವೆಯನ್ನು ಸಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ. 4 ನೇ ಪ್ರತಿವಾದಿಯ ದೊಡ್ಡಪ್ಪನವರು ಖರೀದಿಸಿದ್ದು ನಂತರ 4 ನೇ ಪ್ರತಿವಾದಿಯ ಹಿಸ್ಸಾ ಭಾಗಕ್ಕೆ ಬಂದಿದ್ದು ಅಂದಿನಿಂದ 4 ನೇ ಪ್ರತಿವಾದಿಯೇ ಸದರಿ ಸ್ವತ್ತುಗಳಲ್ಲಿ ಸ್ವಾಧೀನಾನುಭವದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ದಿನಾಂಕ 21.05.1975 ರಲ್ಲಿ 04 ಕ್ರಯಪತ್ರಗಳಿಗೆ ನನ್ನ ಅಜ್ಜ ಮೂಡ್ಲಪ್ಪನವರು ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ವ್ಯವಹಾರದ ಬಗ್ಗೆ ನನ್ನ ಅಜ್ಜ ಮೂಡ್ಲಪ್ಪನವರಿಗೆ ಅವರ ತಮ್ಮ ತಿಮ್ಮಪ್ಪನವರಿಗೆ ಹಿಸ್ಸೆ ಕೊಟ್ಟ ಬಗ್ಗೆ ಒಪ್ಪಿಗೆ ಇದ್ದುದ್ದರಿಂದಲೇ ಒಪ್ಪಿಗೆ ಸಾಕ್ಷಿದಾರರಾಗಿ ಸದರಿ ಕ್ರಯಪತ್ರಗಳಿಗೆ ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಈ ದಾವಾ ಸಲ್ಲಿಸುವ ಪೂರ್ವದಲ್ಲಿ ನಮ್ಮ ಕುಟುಂಬಕ್ಕೆ ಸೇರಿದ ಕೆಲವು ಆಸ್ತಿಗಳನ್ನು ಕೈಬಿಟ್ಟು ಭಾಗಶಃ ಆಸ್ತಿಗಳಿಗೆ ಈ ದಾವೆಯನ್ನು ಸಲ್ಲಿಸಿ ಪ್ರತಿವಾದಿಗಳಿಗೆ ತೊಂದರೆ ಕೊಡಬೇಕೆಂಬ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

4 ನೇ ಪ್ರತಿವಾದಿಯ ದೊಡ್ಡಪ್ಪನವರು ಸದುದ್ದೇಶದ ಖರೀದಿದಾರನಾಗಿ ದಿನಾಂಕ 21.05.1975 ರಲ್ಲಿ ಆಸ್ತಿಗಳನ್ನು ಖರೀದಿಸಿರುತ್ತಾರೆ ಎಂದರೆ ಸರಿಯಲ್ಲ. ಸುಮಾರು 40 ವರ್ಷಗಳ ಹಿಂದಿನಿಂದಲೂ 4 ನೇ ಪ್ರತಿವಾದಿಯ ದೊಡ್ಡಪ್ಪ ಮತುತ 4 ನೇ ಪ್ರತಿವಾದಿಯು ಸ್ವಾಧೀನಾನುಭದಲ್ಲಿ ಇದ್ದು ಅದಕ್ಕೆ ನಾನು ತೊಂದರೆ ಕೊಡಬೇಕೆಂಬ

ಉದ್ದೇಶದಿಂದ ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇ

sd/-

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು ಕಡೂರು.